[ **Govt. of Karnataka** **C.R.P. 67]**

| |
|---|
| **Deposition Sheets (RP.No.57) Form No.4** |

**IN THE COURT OF II Addl. CIVIL JUDGE & J.M.F.C., KARKALA.**

**Criminal Case No. 1795/2023**

**ಪಿ.ಡಬ್ಲು ಃ 5** **ಸಿ.ಡಬ್ಲು ಃ 5**

ಸಾಕ್ಷಿದಾರನ ಹೆಸರು ಃ ಮನೋಜ್
ತಂದೆಯ ಹೆಸರು ಃ ಮಹಾಬಲ
ಪ್ರಾಯ ಃ 20 ವರ್ಷ
ಉದ್ಯೋಗ ಃ ಕೂಲಿ
ವಾಸ ಃ ಮೂಡಬಿದ್ರೆ

ದಿನಾಂಕ **13-06-2024** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರುಃ-**

ಚಾಸಾ-1 ರವರ ಪರಿಚಯ ಇರುವುದಿಲ್ಲ. ಚಾಸಾ-2 ನನ್ನ ತಾಯಿ, ಚಾಸಾ-3 ನನ್ನ ಅಜ್ಜಿ ಮತ್ತು ಚಾಸಾ-4 ನನ್ನ ಸಹೋದರ. ಆರೋಪಿಯ ಪರಿಚಯ ಇರುವುದಿಲ್ಲ. ಸುಮಾರು ಒಂದು ವರ್ಷದ ಹಿಂದೆ ನಾನು ಮತ್ತು ಚಾಸಾ-2, 3 ಮತ್ತು 4 ಒಂದು ಆಟೋದಲ್ಲಿ ಪಣಪಿಲದಿಂದ ಕಾರ್ಕಳಕ್ಕೆ ರಾತ್ರಿ ಸುಮಾರು 7.30 ಗಂಟೆಗೆ ಹೋಗುತ್ತಿರುವಾಗ ನಮ್ಮ ವಾಹನಕ್ಕೆ ಅಫಘಾತವಾಗಿರುತ್ತದೆ. ಆದರೆ ಯಾವ ವಾಹನದಿಂದ ಅಫಘಾತ ಆಗಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ಅಫಘಾತದಿಂದ ನನಗೆ ಯಾವುದೇ ಗಾಯವಾಗಿರುವುದಿಲ್ಲ. ನನ್ನ ತಾಯಿ ಚಾಸಾ-2 ರವರಿಗೆ ಮುಖದ ಬಲ ಕನ್ನೆಗೆ ಸಣ್ಣ ಗಾಯವಾಗಿರುತ್ತದೆ. ಅಫಘಾತ

ಯಾವ ರೀತಿ ಹಾಗೂ ಯಾರ ತಪ್ಪಿನಿಂದ ಆಗಿರುತ್ತದೆ ನನಗೆ ಗೊತ್ತಿಲ್ಲ. ಈ ಬಗ್ಗೆ ಪೋಲೀಸರು ನನ್ನ ಹೇಳಿಕೆಯನ್ನು ಪಡೆದುಕೊಂಡಿರುವುದಿಲ್ಲ.

ಸಾಕ್ಷಿಯು ಅಫಘಾತವಾಗಿದೆ ಎಂದು ಹೇಳುವ ರಿಕ್ಷಾ ಮತ್ತು ಬೈಕಿನ ಭಾವಚಿತ್ರವನ್ನು ನೋಡಿ ಗುರುತಿಸಿರುವುದಿಲ್ಲ.

( ಈ ಸಂಧರ್ಭ ಸಸಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅವಕಾಶ ಕೋರಿದ್ದು ಅವಕಾಶವನ್ನು ನೀಡಲಾಯಿತು.)

**ಪಾಟೀ ಸವಾಲು ಃ ಸಸಅ ರವರಿಂದಃ**

ದಿನಾಂಕ **04-06-2023** ರಂದು ರಾತ್ರಿ **7.30** ಗಂಟೆಗೆ ನಾವು ಕಾರ್ಕಳದ ಪುಲ್ಕೇರಿ ಮಾರ್ಗವಾಗಿ ಮುಡಾರು ಗ್ರಾಮದ ಡಿಡಿಂಬಿರಿ ಗೆ ಹೋಗುತ್ತಿದ್ದಾಗ ಡಿಡಿಂಬಿರಿ ಗರಡಿಯ ಬಳಿ ತಲುಪುವಾಗ ನಾವು ಪ್ರಯಾಣಿಸುತ್ತಿದ್ದ ಅಟೋ ರಿಕ್ಷಾವನ್ನು ಅದರ ಚಾಲಕ ಆರೋಪಿಯು ಅತೀ ವೇಗ ಹಾಗೂ ಅಜಾಗರೂಕತೆಯಿಂದ ಚಲಾಯಿಸಿ ಎದುರಿನಿಂದ ಬರುತ್ತಿದ್ದ ಮೋಟಾರು ಸೈಕಲ್ ಗೆ ಡಿಕ್ಕಿ ಹೊಡೆದ ಪರಿಣಾಮ ಮೋಟಾರು ಸೈಕಲ್ ಸವಾರ ಮೋಟಾರು ಸೈಕಲ್ ಸಮೇತ ರಸ್ತೆಗೆ ಬಿದ್ದರು ಎಂದರೆ ಸರಿಯಲ್ಲ. ಈ ಅಫಘಾತದಿಂದ ರಿಕ್ಷಾದ ಮುಂಭಾಗ ಜಖಂ ಗೊಂಡಿದ್ದು ರಿಕ್ಷಾವನ್ನು ಕೂಡಲೇ ಆರೋಪಿಯು ಅಲ್ಲಿಂದ ಚಲಾಯಿಸಿಕೊಂಡು ನಮ್ಮನ್ನು ನನ್ನ ಅಜ್ಜ ಕೂಕ್ರ ಇವರ ಮನೆಗೆ ಬಿಟ್ಟು ಹೋಗಿರುತ್ತಾನೆ ಎಂದರೆ ಸರಿಯಲ್ಲ. ಈ ಅಫಘಾತದಿಂದ ಗಾಯಗೊಂಡ ಮೋಟಾರು ಸೈಕಲ್ ಸವಾರ ಶಿವಕುಮಾರ್ ಎಂಬುವವರು ಕಾರ್ಕಳ ಸರಕಾರಿ ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಫಲಕಾರಿಯಾಗದೇ ಅದೇ ದಿನ ಮೃತ ಪಟ್ಟಿರುತ್ತಾನೆ ಎಂದರೆ ಸರಿಯಲ್ಲ. ಈ ಅಫಘಾತವು ಆರೋಪಿಯ ಅತಿವೇಗ ಮತ್ತು ಅಜಾಗರೂಕತೆಯ ಚಾಲನೆಯೇ ಕಾರಣ ಎಂದರೆ ಸರಿಯಲ್ಲ. ಆರೋಪಿತರಿಗೆ ಸಹಾಯಮಾಡಲು ಸುಳ್ಳುಸಾಕ್ಷ್ಯ

ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.  ಸಾಕ್ಷಿಯ ಹೇಳಿಕೆಯ ಭಾಗವನ್ನು ನಿಪಿ-**18** ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲು</u>** **:** ಆರೋಪಿ ಪರ **:** ಶ್ರೀ ಬಿ.ಎಸ್.ಎಸ್. ವಕೀಲರಿಂದ : ಏನೂ ಇಲ್ಲ.

ಮರುವಿಚಾರಣೆ : ಇಲ್ಲ

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ. ಕಾರ್ಕಳ